
# ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಮುಖ್ಯ ಇಂಜಿನಿಯರ್ ರವರ ಕಛೇರಿ ನೀರಾವರಿ (ದಕ್ಷಿಣ) ವಲಯ,
ಸಾರ್ವಜನಿ ಕಛೇರಿಗಳ ಕಟ್ಟಡ, ಹೊಸ ಸಯ್ಯಾಜಿ ರಾವ್ ರಸ್ತೆ ಮೈಸೂರು – 570024.
☎ 0821-2443603 0821-2443900 Fax: 0821-2520477
✉ chiefengineer_southcnnl@yahoo.co.in & ceis@rediffmail.com

ಕೃಷ್ಣರಾಜ ಸಾಗರ ಜಲಾಶಯ

## ಮುಖ್ಯ ಇಂಜಿನಿಯರ್, ನೀರಾವರಿ (ದಕ್ಷಿಣ) ವಲಯ, ಕಾ.ನೀ.ನಿ.ನಿ., ಮೈಸೂರು ಇವರ ಕಛೇರಿಯ ನಡವಳಿಗಳು

**ಸಿ.ಇ.ಆರ್. ಸಂಖ್ಯೆ: 176 / 2017–18**

**ವಿಷಯ:–** ಮದ್ದೂರು ತಾಲ್ಲೂಕು ಕಸಬಾ ಹೋಬಳಿಯಲ್ಲಿ ಬರುವ 6 ಸಂಖ್ಯೆ ಕುಂಠಿತಗೊಂಡಿರುವ ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟುಗಳಿಗೆ ಪುನಶ್ಚೇತನ ಮತ್ತು 16 ಕೆರೆಗಳಿಗೆ ಇಗ್ಗಲೂರು ಬ್ಯಾರೇಜಿನ ಹಿನ್ನೀರನ್ನು ಬನ್ನಹಳ್ಳಿ ಹತ್ತಿರ ಏತ ನೀರಾವರಿ ಮೂಲಕ ನೀರು ತುಂಬಿಸುವ ಯೋಜನೆಯ ವಿವರವಾದ ವರದಿಯನ್ನು ಸಲ್ಲಿಸುತ್ತಿರುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ ಜಸಂಇ 58 ಎಂಎಂಕೆ 2016, ಬೆಂಗಳೂರು ದಿನಾಂಕ 20–02–2017
2. ಅಧೀಕ್ಷಕ ಇಂಜಿನಿಯರ್, ಕೃ.ರಾ.ಸಾ.ಆ ಮತ್ತು ಮ.ನೀ.ಯೋ ವೃತ್ತ, ಮಂಡ್ಯ ಇವರ ಪತ್ರ ಸಂಖ್ಯೆ 3310 ದಿನಾಂಕ 21–07–2017

\+ + + + +

**ಪೀಠಿಕೆ:**

ಮಂಡ್ಯ ಜಿಲ್ಲೆ, ಮದ್ದೂರು ತಾ: ಆತಗೂರು ಹೋಬಳಿ ಮತ್ತು ಕಸಬಾ ಹೋಬಳಿಗಳಲ್ಲಿ ಬರುವ ಹಳ್ಳಿಗಳ ಪೂರ್ಣ ಪ್ರದೇಶ ಮಳೆಯ ಆಶ್ರಿತ ಪ್ರದೇಶಗಳಾಗಿರುತ್ತವೆ. ಇತ್ತೀಚಿನ ವರ್ಷಗಳು ಅಂದರೆ ಸುಮಾರು 20 ವರ್ಷಗಳಿಂದ ಆ ಪ್ರದೇಶದಲ್ಲಿ ಸರಿಯಾಗ ಮಳೆಯಾಗದೆ ಮಳೆಯು ಕ್ಷೀಣಿಸುತ್ತಿರುವ ಕಾರಣದಿಂದ ಆ ಭಾಗದಲ್ಲಿ ಬರುವ ಕೆರೆ ಕಟ್ಟೆಗಳು ನೀರು ತುಂಬದೆ ಆ ಪ್ರದೇಶಗಳು ಬರಗಾಲದ ಬವಣೆಯಲ್ಲಿ ಸಿಲುಕಿವೆ ಮತ್ತು ಇತ್ತೀಚಿನ ದಿನಗಳಲ್ಲಿ ಆ ಭಾಗಗಳಲ್ಲಿ ಅಂತರ್ ಜಲ ಮಟ್ಟ ಪೂರ್ಣವಾಗಿ ಕುಸಿದಿರುವುದರಿಂದ ಆ ಬಾಗದಲ್ಲಿ ಸಾವಿರ ಅಡಿಗಳು ಆಳದಷ್ಟು ಕೊರೆದಿರುವ ಕೊಳವೆ ಬಾವಿಗಳಲ್ಲಿ ಕೂಡ ನೀರು ಸರಿಯಾಗಿ ಲಭ್ಯವಾಗುತ್ತಿಲ್ಲ. ಇನ್ನೂ ಹೆಚ್ಚಿನ ಆಳ ಕೊಳವೆ ಬಾವಿ ಕೊರಿಸಿದರೆ ನೀರಿನಂತಹ ಹೆಚ್ಚಿನ ಪ್ಲೋರೈಡ್ ಮತ್ತು ನೈಟ್ರೈಟ್ ದೊರೆಯುವ ಸಾಧ್ಯತೆ ಇರುವುದರಿಂದ ಆ ಭಾಗದ ಜನ–ಜಾನುವಾರು, ಪಕ್ಷಿ–ಪ್ರಾಣಿಗಳಿಗೆ ಆರೋಗ್ಯದ ಮೇಲೆ ಪರಿಣಾಮವಾಗುವುದರಿಂದ ಕುಡಿಯುವ ನೀರಿಗೂ ಬವಣೆಯಲ್ಲಿ ಒಳಗಾಗಿರುತ್ತವೆ. ಈ ಭಾಗದ ಸೋಮನಹಳ್ಳಿ ಹತ್ತಿರ ಇರುವ ಮಳೆಯ ಮಾಪನದ ಕೇಂದ್ರದ ವಿವರಗಳನ್ನು ಗಮನಿಸಿದಾಗ ಮಳೆಯ ಸರಾಸರಿ 676.14 ಎಂ ಎಂ. ಇರುವುದರಿಂದ ಈ ಮಳೆಯಿಂದ ಹೆಚ್ಚಿನ ಅಂತರ ಜಲ ಮಟ್ಟ ಅಭಿವೃದ್ಧಿಯಾಗದೇ ಕುಡಿಯುವ ನೀರಿಗೂ ತೊಂದರೆಯಾಗಿರುತ್ತದೆ. ಇದರಿಂದ ಈ ಭಾಗದ ಜನ ಆರ್ಥಿಕವಾಗಿ ಹಿಂದುಳಿದಿರುವುದರಿಂದ, ಮಾನ್ಯ ಶ್ರೀ ನಂಜುಂಡಪ್ಪ, ಹಿಂದುಳಿ ಆಯೋಗದ ಅಧ್ಯಕ್ಷರವರು ಸದರಿ ತಾಲ್ಲೂಕನ್ನು ಹಿಂದುಳಿದ ಪ್ರದೇಶವೆಂದು ಘೋಷಣೆ ಮಾಡಿರುತ್ತಾರೆ.

ಮದ್ದೂರು ತಾಲ್ಲೂಕು, ಆತಗೂರು ಮತ್ತು ಕಸಬಾ ಹೋಬಳಿಗಳ ಸ್ಥಿತಿ–ಗತಿಗಳನ್ನು ಅರಿತು ಸ್ಥಳೀಯ ಜನ ಪ್ರತಿನಿಧಿಗಳು ಸಾರ್ವಜನಿಕರ ನೀರಿನ ಬವಣೆಯನ್ನು ನೀಗಿಸಲು ಹಾಗೂ

Scanned with CamScanner

ಮದ್ದೂರು ತಾಲ್ಲೂಕಿನ ಕುಂಠಿತ ಏತ ನೀರಾವರಿ ಯೋಜನೆಗಳನ್ನು ಪುನರ್ಶ್ಚೇತನಗೊಳಿಸಲು ಸರ್ಕಾರವನ್ನು ಒತ್ತಾಯಿಸುತಿದ್ದು, ಈ ವಿಷಯವು ವಿಧಾನ ಮಂಡಲ ಹಲವಾರು ಅಧಿವೇಶನಗಳಲ್ಲಿ ಚರ್ಚಿತವಾಗಿರುತ್ತದೆ.

ಅದರಂತೆ, ಮಂಡ್ಯ ಜಿಲ್ಲಾ , ಮದ್ದೂರು ತಾ: ಶಿಂಷಾ ನದಿಯ ಎಡಭಾಗದ ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ಬರುವ 16 ಕೆರೆಗಳಿಗೆ ಏತ ನೀರಾವರಿ ಯೋಜನೆಯ ಮೂಲಕ ನೀರು ತುಂಬಿಸುವ ಸಂಬಂಧ ಹಾಗೂ ಹಾಲಿ ನಿಷ್ಪ್ರಯೋಜಕವಾಗಿರುವ ಏತ ನೀರಾವರಿ ಯೋಜನೆಗಳನ್ನು ಪುನಶ್ಚೇತನಗೊಳಿಸುವ ಸಂಬಂಧ ಸರ್ವೆ ಮಾಡಿ ಸಲಹೆ / ಪರ್ಯಾಯ ವ್ಯವಸ್ಥೆ ಸೂಚಿಸಲು ನುರಿತ ಅನುಭವ ಹೊಂದಿರುವ ಮೆ: ಡಿಸೈನ್ ಗ್ರೂಪ್ಸ್, ಲಾಲ್‌ಬಾಗ್ ರಸ್ತೆ , ಬೆಂಗಳೂರು ಇವರಿಗೆ ವಹಿಸಲಾಗಿರುತ್ತದೆ.

ಪ್ರಥಮ ಹಂತದಲ್ಲಿ ಮದ್ದೂರು ತಾ: ಶಿಂಷಾ ನದಿಯ ಎಡಭಾಗದಲ್ಲಿ ಬರುವ ಕಸಬಾ ಹೋಬಳಿ ವ್ಯಾಪ್ತಿಯ ಎಲ್ಲಾ ಕೆರೆ-ಕಟ್ಟೆಗಳು ಮತ್ತು ಆ ವ್ಯಾಪ್ತಿಯ ಏತ ನೀರಾವರಿ ಯೋಜನೆಗಳನ್ನು ಸ್ಥಿತಿ-ಗತಿ, ವಸ್ತು -ಸ್ಥಿತಿ ಮತ್ತು ಪುನಶ್ಚೇತನಗೊಳಿಸುವ ಬಗ್ಗೆ ಪರಿವೀಕ್ಷಣೆ ಮಾಡಿ ಅವರಿಂದ ವರದಿಯನ್ನು ಪಡೆಯಲಾಗಿದ್ದು, ವರದಿಯಲ್ಲಿ ಕುಂಠಿತಗೊಂಡಿರುವ ಏತ ನೀರಾವರಿ ಯೋಜನೆಗಳಾದ 1) ಸೋಮನಹಳ್ಳಿ ಏತ ನೀರಾವರಿ ಯೋಜನೆ 2) ಕೆ ಕೋಡಿಹಳ್ಳಿ ಏತ ನೀರಾವರಿ ಯೋಜನೆ 3) ಬೂದಗುಪ್ಪೆ ಏತ ನೀರಾವರಿ ಯೋಜನೆ 4) ಆಲೂರು ದೊಡ್ಡಿ ಏತ ನೀರಾವರಿ ಯೋಜನೆ 5) ಹುಲಿಕೆರೆ ಏತ ನೀರಾವರಿ ಯೋಜನೆ ಮತ್ತು ಸಮರ್ಪಕವಾಗಿ ಕಾರ್ಯನಿರ್ವಹಿಸದ ಮತ್ತು 6) ಕಬ್ಬಾರೆ ಏತ ನೀರಾವರಿ ಯೋಜನೆ ಇವುಗಳನ್ನು ಒಳಗಂಡ ಒಟ್ಟು 6 ಸಂಖ್ಯೆಯ ಏತ ನೀರಾವರಿ ಯೋಜನೆಗಳನ್ನು ಪುನಶ್ಚೇತನಗೊಳಿಸುವ ಸಲುವಾಗಿ ಪಿ- 1, ಪಿ- 2 ಪೈಪ್‌ಗಳ ಬದಲಾಗಿ ಹೊಸದಾಗಿ ಪಿ.ಎಸ್.ಸಿ ಪೈಪ್ ಅಳವಡಿಸುವುದು, ಯೋಜನೆಗಳನ್ನು ದುರಸ್ಥಿಪಡಿಸಿ, ನಿರಂತರವಾಗಿ ವಿದ್ಯುತ್ ಕಲ್ಪಿಸಿ ಮತ್ತು ನಿರ್ವಹಣೆ ಮಾಡುವ ಎಲ್ಲಾ ವೆಚ್ಚಗಳು ಸೇರಿದಾಗ ಇದರ ಬದಲು ಶಿಂಷಾ ಎಡದಂಡೆ ನಾಲೆಯ ಕಸಬಾ ಹೋಬಳಿಯಲ್ಲಿ ಬರುವ "16 ಕೆರೆಗಳಿಗೆ ಏಕೈಕ ಏತ ನೀರಾವರಿ ಯೋಜನೆ" ನಿರ್ಮಿಸಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಈ ಮೇಲ್ಕಂಡ 6 ಏತ ನೀರಾವರಿ ಯೋಜನೆಗಳನ್ನು ನಿಷ್ಕ್ರಿಯಗೊಳಿಸಿ, ಇಗ್ಗಲೂರು ಬ್ಯಾರೇಜ್ ಹಿನ್ನೀರಿನಲ್ಲಿ ನಿರಂತರವಾಗಿ ದೊರೆಯುವ ಸ್ಥಳ ಮದ್ದೂರು ತಾಲ್ಲೂಕು ಬನ್ನಹಳ್ಳಿ ಬಳಿಯಲ್ಲಿ ಪರ್ಯಾಯವಾಗಿ ಏತ ನೀರಾವರಿ ಯೋಜನೆಯನ್ನು ನಿರ್ಮಿಸುವ ಮೂಲಕ ಶಿಂಷಾ ಎಡದಂಡೆ ಕಸಬಾ ಹೋಬಳಿ ವ್ಯಾಪ್ತಿಯ ಬರುವ ತಿಪ್ಪೂರು ಕೆರೆಯನ್ನು ತುಂಬಿಸಿ ಇತರೆ 15 ಕೆರೆಗಳನ್ನು ನೀರು ತುಂಬಿಸುವ ಯೋಜನೆಗೆ ಉಪಯೋಗಿಸಿಕೊಳ್ಳುವುದರಿಂದ ಆ ಭಾಗದಲ್ಲಿ ಎಲ್ಲಾ ಕೆರೆಗಳಿಗೆ ನೀರು ತುಂಬಿಸಬಹುದು. ಅಲ್ಲದೆ, ಶಿಂಷಾ ಎಡದಂಡೆ ನಾಲೆಯ ತೈಲೂರು ಕೆರೆಯಿಂದ ಮುಂದೆ ಬರುವ ಕೆರೆಗಳು ಮತ್ತು ನಾಲೆಯ ಕೊನೆಯ ಬಾಧಿತ ಅಚ್ಚುಕಟ್ಟುಗಳಿಗೆ ಸಮರ್ಪಕವಾಗಿ ನೀರೊದಗಿಸಬಹುದಾಗಿರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿ ಸಂಭಾವನೆ ವರದಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಲಾಗಿರುತ್ತದೆ. ನೀರನ್ನು ತುಂಬಲು ಉದ್ದೇಶಿಸಿರುವ ಕೆರೆಗಳು ಕೆಳಕಂಡಂತಿರುತ್ತದೆ.

| | | | |
|---|---|---|---|
| 1. ತಿಪ್ಪೂರು ಕೆರೆ | 5. ಹಾಗಲಹಳ್ಳಿ ಕೆರೆ | 9. ಭೀಮನಕೆರೆ | 13. ಮಾದನಾಯಕನಹಳ್ಳಿ ಕೆರೆ |
| 2. ಕೆ. ಬೆಳ್ಳೂರು ಕೆರೆ | 6. ಕಬ್ಬಾರೆ ಕೆರೆ | 10. ಬ್ಯಾಡರಹಳ್ಳಿ ಕೆರೆ | 14. ತೈಲೂರು ಕೆರೆ |
| 3. ಅಂಕೇಗೌಡನದೊಡ್ಡಿ ಕೆರೆ | 7. ಹೊನ್ನಲಗೆರೆ ಕೆರೆ | 11. ಬಾಣೋಜಿಪಂತ್ ಕೆರೆ | 15. ಆಲೂರು ಕೆರೆ |
| 4. ಹಳ್ಳಿಕೆರೆ | 8. ಹೊನ್ನಲಗೆರೆ ಚಿಕ್ಕೆರೆ | 12. ರಾಜೇಗೌಡನದೊಡ್ಡಿ ಕೆರೆ | 16. ನೀಲಕಂಠನಹಳ್ಳಿ ಕೆರೆ |

ಯೋಜನಾ ವರದಿಯ ವಿವರಗಳು ಕೆಳಕಂಡಂತಿದೆ.

1. ಜಲವಿಜ್ಞಾನ:

Scanned with CamScanner

ಅ) ನೀರು ದೊರೆಯುವಿಕೆ: ಈ ಪ್ರಸ್ತಾಪಿತ ಯೋಜನೆಗೆ ಬೇಕಾಗಿರುವ ನೀರಿನ ಪ್ರಮಾಣ 0.5742 ಟಿ.ಎಂ.ಸಿ ಯಷ್ಟು ನೀರನ್ನು ಇಗ್ಗಲೂರು ಬ್ಯಾರೇಜ್ ಹಿನ್ನೀರನ್ನು ಬನ್ನಹಳ್ಳಿ ಗ್ರಾಮದ ಹತ್ತಿರ ಹತ್ತಿರ 120 ದಿನಗಳಲ್ಲಿ ಒಂದು ದಿನಕ್ಕೆ 20 ಗಂಟೆಯಂತೆ 73.00 ಕ್ಯೂಸೆಕ್ಸ್ ನೀರನ್ನು ಉಪಯೋಗಿಸಿಕೊಳ್ಳಲಾಗುವುದು.

ಆ) ಇಗ್ಗಲೂರು ಬ್ಯಾರೇಜ್ ನಿಂದ ಕಳೆದ 18 ವರ್ಷಗಳಿಂದ ಹೊರ ಹೋಗಿರುವ ನೀರಿನ ಪ್ರಮಾಣ ದಾಖಲೆಗಳನ್ನು ಪರಿಶೀಲಿಸಿದಾಗ ಕನಿಷ್ಟ ಮಳೆಗಾಲದ ವರ್ಷದಲ್ಲೂ ಕೂಡ 6.48 ಟಿ.ಎಂ.ಸಿ ಹಾಗೂ 18 ವರ್ಷಗಳಲ್ಲಿ ಸರಾಸರಿ 19.21 ಟಿ.ಎಂ.ಸಿ ಯಷ್ಟು ನೀರು ಪ್ರತಿ ವರ್ಷ ಬ್ಯಾರೇಜ್ ನಿಂದ ಹೊರ ಹರಿದಿರುತ್ತದೆ. ಇಗ್ಗಲೂರು ಬ್ಯಾರೇಜ್ ಗೆ ನೀರಿನ ಲಭ್ಯತೆಯ ಹೈಡ್ರೋಲಾಜಿ ವರದಿ ತಯಾರಿಸಲಾಗಿದ್ದು, ಹೈಡ್ರೋಲಾಜಿ ವರದಿ ಪ್ರಕಾರ ಮಳೆಯಿಂದ 2.708 ಟಿಎಂಸಿ ಹಾಗೂ ಬೀಳು ನೀರಿನಿಂದ 4.946 ಟಿಎಂಸಿ ಒಟ್ಟು 7.654 ಟಿಎಂಸಿ ನೀರು ದೊರಕುತ್ತಿದ್ದು ಇದರಲ್ಲಿ 5.021 ಟಿಎಂಸಿ ನೀರನ್ನು ಇತರ ಯೋಜನೆಗಳಿಗೆ ಉಪಯೋಗಿಸಿಕೊಂಡು ಉಳಿಕೆ 2.633 ಟಿಎಂಸಿ ಲಭ್ಯತೆಯಲ್ಲಿ 0.5742 ಟಿಎಂಸಿ ಯಷ್ಟು ನೀರನ್ನು ಸದರಿ ಯೋಜನೆಗೆ ಉಪಯೋಗಿಸಿಕೊಳ್ಳಲು ಉದ್ದೇಶಿಸಲಾಗಿದೆ.

ಸದರಿ ಯೋಜನೆಗೆ 0.5742 ಟಿ ಎಂ ಸಿ ಯಷ್ಟು ನೀರನ್ನು ಮಾತ್ರ ಬಳಕೆ ಮಾಡಲಾಗುವುದರಿಂದ ಕೆರೆ-ಕಟ್ಟೆಗಳು ತುಂಬುವುದರಿಂದ ಜನ-ಜಾನುವಾರುಗಳಿಗೆ ಮತ್ತು ಪ್ರಾಣಿ - ಪಕ್ಷಿಗಳಿಗೆ ಕುಡಿಯುವ ನೀರು ಸರಾಗವಾಗಿ ದೊರಕಿಸಿಕೊಡುವುದರಿಂದ ಜನ-ಜಾನುವಾರುಗಳ ಮತ್ತು ಪ್ರಾಣಿ - ಪಕ್ಷಿಗಳ ಪ್ರಾಣ ರಕ್ಷಣೆ ಮಾಡುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಆದ್ಯ ಕರ್ತವ್ಯ ಆಗಿರುವುದರಿಂದ ನೀರು ನಿರ್ವಹಣೆ ನಿಯಮ "(Central and State Government Water Policy)" ಇರುವುದರಿಂದ ಪ್ರಥಮ ಪ್ರಾಶಸ್ತ್ಯ ಕೊಡಬೇಕಾಗಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕೂಡ ಜನ-ಜಾನುವಾರುಗಳು, ಪ್ರಾಣಿ-ಪಕ್ಷಿಗಳಿಗೆ ಕುಡಿಯುವ ನೀರಿಗೆ ಮೊದಲ ಆದ್ಯತೆಯನ್ನು ಕೊಡುವಂತೆ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**Drinking is the most beneficial use of water and the need is so paramount that it can't be made subservient to any other use of water like irrigation. So that fight to use of water for domestic purpose, would prevail over the other needs.**

**As such the drinking water supply project has to be consider top priority.**

2. ವಿದ್ಯುತ್ ಸರಬರಾಜು ಕಲ್ಪಿಸುವಿಕೆ:

Scanned with CamScanner

ಈ ಯೋಜನೆಗೆ ನಿರಂತರ ವಿದ್ಯುತ್ ಸಂಪರ್ಕವನ್ನು ಮದ್ದೂರು ತಾಲ್ಲೂಕು ಕಸಬಾ ಹೋಬಳಿ, ಕಬ್ಬಾರೆ ಗ್ರಾಮದ ಹತ್ತಿರ ಸಬ್ ಸ್ಟೇಷನ್ ಇರುವುದರಿಂದ ಯೋಜನೆಯ ಪಂಪ್ ಹೌಸ್ ನಿರ್ಮಾಣ ಮಾಡುವ ಬನ್ನಹಳ್ಳಿ ಗ್ರಾಮದ ಹತ್ತಿರದಿಂದ ಕಬ್ಬಾರೆ ಗ್ರಾಮದ ಸಬ್ ಸ್ಟೇಷನ್ ವರೆವಿಗೆ 6 ಕಿ.ಮೀ ದೂರವಿದ್ದು, 5000 ಕೆ.ವಿ.ಎ ವಿದ್ಯುತ್ ಅವಶ್ಯಕತೆ ಇರುತ್ತದೆ. ಇದಕ್ಕಾಗಿ ಅಂದಾಜಿನಲ್ಲಿ ಅನುವು ಮಾಡಲಾಗಿದೆ.

3. ಪಂಪ್ ಮತ್ತು ಮೆಷನರಿಗಳು ಮತ್ತು ಏರು ಕೊಳವೆ ವಿನ್ಯಾಸ:-

ಮದ್ದೂರು ತಾಲ್ಲೂಕು, ಬನ್ನಹಳ್ಳಿ ಗ್ರಾಮದ ಹತ್ತಿರ ಶಿಂಷಾ ನದಿಗೆ ಇನ್ಟೆಕ್ ಚಾನಲ್ ನಿರ್ಮಾಣ ಮಾಡಿ ನದಿಯ ದಡದ ಪಕ್ಕದಲ್ಲಿ ಜಾಕ್ ವೆಲ್ ಕಮ್ ಪಂಪ್ ಹೌಸ್ ನಿರ್ಮಾಣ ಮಾಡಿ ಅದರ ಒಳಗಡೆ 04 ಸಂಖ್ಯೆಯ 900 ಹೆಚ್.ಪಿ ವರ್ಟಿಕಲ್ ಟರ್ಬೈನ್ ಪಂಪ್ ಮತ್ತು 2 ಸಂಖ್ಯೆಯ ಸ್ಟಾಂಡ್ ಬೈ ಪಂಪ್‌ಗಳನ್ನು ಅಳವಡಿಸುವುದು. 2 ಸಂಖ್ಯೆಯ ಸ್ಟಾಂಡ್ ಪಂಪ್ ನ್ನು ಅಳವಡಿಸುವ ಉದ್ದೇಶ ಏನೆಂದರೆ ಈಗಾಗಲೇ ಕುಂಠಿತಗೊಂಡಿರುವ ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶಗಳಿಗೆ ನೀರು ಸರಾಗವಾಗಿ ದೊರಕುವಂತೆ ಪಂಪ್ ಮತ್ತು ಮೋಟಾರ್ ಗಳು ದುರಸ್ಥಿಗೆ ಬಂದಗಾಲು ಕೂಡ ಬೆಳೆಗಳು ಒಣಗದ ರೀತಿಯಲ್ಲಿ ಕಾಪಾಡುವುದಕ್ಕೆ ಹೆಚ್ಚಿಗೆ 2 ಸಂಖ್ಯೆ ಸ್ಟಾಂಡ್ ಬೇ ಪಂಪ್ ನ್ನು ಯೋಜನೆಗೆ ಅಳವಡಿಸಲಾಗಿದೆ. ಯೋಜನೆಯ ಏರು ಕೊಳವೆಯನ್ನು 14.965 ಕಿ.ಮೀ ವರೆಗೆ 1219ಎಂ ಎಂ ವ್ಯಾಸದಿಂದ 508 ಎಂ ಎಂ ವ್ಯಾಸದ ವರೆಗೆ ಎಂ ಎಸ್ ಪೈಪ್ ಗಳು ಮತ್ತು 15.362 ಕಿ.ಮೀ ವರೆಗೆ ಡಿ.ಐ ಪೈಪುಗಳನ್ನು ಅಳವಡಿಸಬೇಕಾಗಿರುತ್ತದೆ. ಏರು ಕೊಳವೆ ಹಾದು ಹೋಗುವ ರುದ್ರಾಕ್ಷಿಪುರ ಹಲಗೂರು ರಸ್ತೆ ಜಿಲ್ಲಾ ರಸ್ತೆಯಾಗಿದ್ದು, ಏರು ಕೊಳವೆ ಅಳವಡಿಸುವುದಕ್ಕೆ ರಸ್ತೆ ಅಗೆತ ಮಾಡಿ ಅಳವಡಿಸಬೇಕಾಗಿರುತ್ತದೆ. ಆದ್ದರಿಂದ, ಸದರಿ ರಸ್ತೆಯನ್ನು ಪುನರ್ ನಿರ್ಮಾಣ ಮಾಡುವುದಕ್ಕೆ ಯೋಜನೆಯ ವರದಿಯಲ್ಲಿ ಅನುವು ಮಾಡಲಾಗಿದೆ.

4. ಭೂ ಸ್ವಾಧೀನ:-

ಸದರಿ ಯೋಜನೆಯನ್ನು ನಿರ್ಮಾಣ ಮಾಡುವುದಕ್ಕೆ ಭೂ ಸ್ವಾಧೀನ ಅತ್ಯಾವಶ್ಯಕವಾಗಿ ಆಗಬೇಕಾಗಿರುತ್ತದೆ. ಜಾಕ್ ವೆಲ್ ನಿರ್ಮಾಣ ಮಾಡುವ ಸ್ಥಳ ಸುಮಾರು 6000 ಚದರ ಮೀಟರ್, ರಿಡ್ಜ್ ಸಿಸ್ಟನ್ ಗಳನ್ನು ನಿರ್ಮಾಣ ಮಾಡುವುದಕ್ಕೆ 7600 ಚದರ ಮೀಟರ್ ಮತ್ತು ಏರು ಕೊಳವೆಗಳನ್ನು ಅಳವಡಿಸುವುದಕ್ಕೆ ಹಾಗೂ ಅವುಗಳನ್ನು ಪರಿವೀಕ್ಷಣೆ ಮಾಡುವ ದೃಷ್ಟಿ ಇಟ್ಟುಕೊಂಡು ರಸ್ತೆ ನಿರ್ಮಾಣ ಮಾಡುವುದಕ್ಕೆ, ಭೂ ಸ್ವಾಧೀನಕ್ಕೆ 153915 ಚದರ ಮೀಟರ್ ಎಲ್ಲಾವು ಸೇರಿ 167515 ಚದರ ಮೀಟರ್ ಅಂದರೆ 16.75 ಹೆಕ್ಟೇರ್ ಅಥವಾ 47.37 ಎಕರೆ ಪ್ರದೇಶವನ್ನು ಭೂ ಸ್ವಾಧೀನ ಮಾಡಿಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಭೂ ಸ್ವಾಧೀನ ಪ್ರಕ್ರಿಯೆಗೆ ಯೋಜನಾ ವರದಿಯಲ್ಲಿ 3.67,50,000/- ರೂ. ಗಳನ್ನು ಅನುವು ಮಾಡಿಕೊಳ್ಳಲಾಗಿದೆ.

Scanned with CamScanner

ಮೇಲಿನ ಎಲ್ಲಾ ಅಂಶಗಳನ್ನು ಅಳವಡಿಸಿಕೊಂಡು 2016-17 ನೇ ಸಾಲಿನ ಜಲಸಂಪನ್ಮೂಲ ಇಲಾಖೆಯ ದರ ಸೂಚಿ, 2015-16ನೇ ಸಾಲಿನ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ದರ ಸೂಚಿ, 2016-17ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರ ಸೂಚಿ ಮತ್ತು 2014-15 ನೇ ಸಾಲಿನ ಲೋಕೋಪಯೋಗಿ ಇಲಾಖೆ ದರ ಸೂಚಿ (ವಿದ್ಯುತ್) ದರಗಳನ್ನು ಅಳವಡಿಸಿಕೊಂಡು ರೂ. 77.00 ಕೋಟಿಗಳಿಗೆ ಯೋಜನಾ ವರದಿಯನ್ನು ತಯಾರಿಸಲಾಗಿದೆ.

2014-15 ನೇ ಸಾಲಿನ ವಾರ್ಷಿಕ ಕಾರ್ಯಕ್ರಮ ಪಟ್ಟಿಯಲ್ಲಿ ಹೊಸ ಕಾಮಕಾರಿಗಳ ಪಟ್ಟಿಯಲ್ಲಿ (ಎಡಬ್ಲ್ಯೂಪಿ ಕ್ರಮ ಸಂಖ್ಯೆ: 298 ರಲ್ಲಿ ಅಂದಾಜು ಮೊತ್ತ ರೂ 7700.00 ಲಕ್ಷ ಮತ್ತು ರೂ. 50.00 ಲಕ್ಷಗಳ ಅನುದಾನ) ಸೇರ್ಪಡೆಗೊಂಡಿರುತ್ತದೆ.

**ಆದೇಶ:**

ಕಾವೇರಿ ನೀರಾವರಿ ನಿಗಮದ ಆರ್ಥಿಕ ಪ್ರತ್ಯಾದೇಶದನ್ವಯ ಪ್ರದತ್ತವಾದ ಅಧಿಕಾರದಂತೆ, ಮದ್ದೂರು ತಾಲ್ಲೂಕು ಕಸಬಾ ಹೋಬಳಿಯಲ್ಲಿ ಬರುವ 6 ಸಂಖ್ಯೆ ಕುಂಠಿತಗೊಂಡಿರುವ ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟುಗಳಿಗೆ ಪುನಶ್ಚೇತನ ಮತ್ತು 16 ಕೆರೆಗಳಿಗೆ ಇಗ್ಗಲೂರು ಬ್ಯಾರೇಜಿನ ಹಿನ್ನೀರನ್ನು ಬನ್ನಹಳ್ಳಿ ಹತ್ತಿರ ಏತ ನೀರಾವರಿ ಮೂಲಕ ನೀರು ತುಂಬಿಸುವ ಯೋಜನೆಯ ಕಾಮಗಾರಿಯ ರೂ. 7,700.00 ಲಕ್ಷ (ರೂ. ಏಳು ಸಾವಿರದ ಏಳುನೂರ ಲಕ್ಷಗಳು ಮಾತ್ರ) ಅಂದಾಜಿಗೆ ಇದರೊಂದಿಗೆ ಲಗತ್ತಿಸಿರುವ ತಾಂತ್ರಿಕ ಟಿಪ್ಪಣಿಯಲ್ಲಿನ ನಿಬಂಧನೆಗಳಿಗೊಳಪಟ್ಟು 'Other works under Capital Head – Drinking Water / Tank filling Scheme' ಲೆಕ್ಕ ಶೀರ್ಷಿಕೆಯಡಿಯಲ್ಲಿ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ.

(ಡಿ.ಮಂಜುನಾಥ್)
ಮುಖ್ಯ ಇಂಜಿನಿಯರ್,
ನೀರಾವರಿ (ದಕ್ಷಿಣ) ವಲಯ,
ಕಾನೀನಿನಿ, ಮೈಸೂರು

ಸಂಖ್ಯೆ ಸಿ.ಇ.ಎಸ್/ ಕಾನೀನಿನಿ / ತಾಂಸ-1/ ಡಬ್ಲೂಎಸ್‌ಕೆ/ ಬನ್ನಹಳ್ಳಿ/ 2017-18

1. ಪ್ರತಿಯನ್ನು ವ್ಯವಸ್ಥಾಪಕ ನಿರ್ದೇಶಕರು, ಕಾ.ನೀ.ನಿ.ನಿ., ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಅಧೀಕ್ಷಕ ಇಂಜಿನಿಯರ್, ಕಬಿನಿ ಮತ್ತು ವರುಣಾ ನಾಲಾ ವೃತ್ತ, ಮೈಸೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಪ್ರತಿಯನ್ನು ಮಂಜೂರಾದ ಅಂದಾಜು ಪಟ್ಟಿಯೊಂದಿಗೆ ಕಾರ್ಯಪಾಲಕ ಇಂಜಿನಿಯರ್, ವಿಶ್ವೇಶ್ವರಯ್ಯ ನಾಲಾ ವಿಭಾಗ, ಮಂಡ್ಯ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಪ್ರತಿಯನ್ನು ಮುಖ್ಯ ಲೆಕ್ಕಾಧಿಕಾರಿಗಳು, ಕಾ.ನೀ.ನಿ.ನಿ., ಮೈಸೂರು ಇವರಿಗೆ ಮಾಹಿತಿಗಾಗಿ ರವಾನಿಸಿದೆ.

Scanned with CamScanner

5. ಪ್ರತಿಯನ್ನು ಕೇಂದ್ರ ಕಛೇರಿಯ ಡ್ರಾಯಿಂಗ್ ಬ್ರಾಂಚ್‌ಗೆ ಕಳುಹಿಸಿದೆ.

6. ಪ್ರತಿ ಕಡತಕ್ಕೆ.

ಮುಖ್ಯ ಇಂಜಿನಿಯರ್
ನೀರಾವರಿ (ದಕ್ಷಿಣ) ವಲಯ,
ಕಾನೀನಿನಿ, ಮೈಸೂರು

Scanned with CamScanner

## ತಾಂತ್ರಿಕ ಟಿಪ್ಪಣಿ

176/2017-18

**ಸಿ.ಇ.ಆರ್. ಸಂಖ್ಯೆ: ~~315 / 2013-14~~**

**ವಿಷಯ:** ಮದ್ದೂರು ತಾಲ್ಲೂಕು ಕಸಬಾ ಹೋಬಳಿಯಲ್ಲಿ ಬರುವ 6 ಸಂಖ್ಯೆ ಕುಂಠಿತಗೊಂಡಿರುವ ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟುಗಳಿಗೆ ಪುನಶ್ಚೇತನ ಮತ್ತು 16 ಕೆರೆಗಳಿಗೆ ಇಗ್ಗಲೂರು ಬ್ಯಾರೇಜಿನ ಹಿನ್ನೀರನ್ನು ಬನ್ನಹಳ್ಳಿ ಹತ್ತಿರ ಏತ ನೀರಾವರಿ ಮೂಲಕ ನೀರು ತುಂಬಿಸುವ ಯೋಜನೆಯ ಕಾಮಗಾರಿಯ ಅಂದಾಜು

* * * * *

1. ಅಂದಾಜುಪಟ್ಟಿಯಲ್ಲಿನ ಕೆಲಸದ ಸಂಬಂಧ ಯಾವುದೇ ಬದಲಾವಣೆ / ಹೆಚ್ಚಿನ ಅಂಶ ನಿರ್ವಹಿಸುವ ಮೊದಲು, ಮುಖ್ಯ ಇಂಜಿನಿಯರ್‌ರವರಿಂದ ಅನುಮತಿ ಪಡೆಯತಕ್ಕದ್ದು.
2. ಮಂಜೂರಾದ ಅಂದಾಜು ಪಟ್ಟಿಯಲ್ಲಿರುವ ಕಾಮಗಾರಿಗಳನ್ನು ಹೊರತುಪಡಿಸಿ ಇತರೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತಿಲ್ಲ.
3. ಕಾಮಗಾರಿಯ ಸ್ಥಳದಲ್ಲಿ ಲಭ್ಯವಾಗುವ ಮತ್ತು ಉಪಯೋಗಕ್ಕೆ ಬರುವ ಎಲ್ಲಾ ಸಾಮಗ್ರಿಗಳನ್ನು ಕಾಮಗಾರಿಗೆ ಉಪಯೋಗಿಸಿಕೊಳ್ಳತಕ್ಕದ್ದು.
4. ಅನುಕೂಲತೆಗೆ ಅನುಗುಣವಾಗಿ ಕಾಮಗಾರಿಯನ್ನು ಭಾಗ ಮಾಡತಕ್ಕದಲ್ಲ.
5. ಅಂದಾಜುಪಟ್ಟಿಯಲ್ಲಿನ ಎಲ್ಲಾ ಕಾಮಗಾರಿಗಳನ್ನು ಗುಣ ನಿಯಂತ್ರಣ ಪರೀಕ್ಷೆಗೆ ಒಳಪಡಿಸತಕ್ಕದ್ದು.
6. ಕಾಮಗಾರಿಗಳನ್ನು ನಿರ್ವಹಿಸುವಾಗ ವಿವಿದ ಹಂತದಲ್ಲಿ ಫೋಟೋಗ್ರಾಫ್/ ವಿಡಿಯೋಗ್ರಾಫ್‌ನೊಂದಿಗೆ ದಾಖಲೀಕರಿಸತಕ್ಕದ್ದು
7. ಕೆರೆಗಳ ಸದೃಡತೆ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ದೃಢೀಕರಣ ಪಡೆಯುವುದು.
8. ಕುಡಿಯುವ ನೀರು ಸರಬರಾಜಿಗೆ ಸಂಬಂಧಿಸಿದಂತೆ ಆರ್.ಡಿ.ಪಿ.ಆರ್. ಇಲಾಖೆಯಿಂದ ಸಹಮತಿ ಪಡೆಯುವುದು.

ಮುಖ್ಯ ಇಂಜಿನಿಯರ್
ನೀರಾವರಿ (ದಕ್ಷಿಣ) ವಲಯ,
ಕಾನೀನಿನಿ, ಮೈಸೂರು

Scanned with CamScanner